3. ಸದರಿ ಪ್ರತಿಮೆಯನ್ನು ಅನಾವರಣಗೊಳಿಸಲು ವಿಳಂಬವಾಗುತ್ತಿರುವುದ್ದಕ್ಕೆ ಕಾರಣಗಳೇನು? ಅದನ್ನು ಯಾವಾಗ ಅನಾವರಣಗೊಳಿಸಲಾಗುವುದು?

ಶ್ರೀ ವೈ.ನಾಗಪ್ಪ(ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಸರ್ಕಾರದ ಆದೇಶ ಸಂ:ಸಕೆಇ 56 ಪಕವಿ 2003, ದಿ: 3–1–2004ರಲ್ಲಿ ದಿವಂಗತ ಬಾಬುಜಗಜೀವನರಾಂ ರವರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ನಿರ್ಧರಿಸಿದೆ.

ಇ) ಸರ್ಕಾರಿ ಆದೇಶ ಸಂ: ಸಕೆಇ ಪಕವಿ 2003, ದಿ: 3–1–04 ರಲ್ಲಿ ಪ್ರತಿಮೆ ನಿರ್ಮಾಣಕಾರ್ಯವನ್ನು ಅನುಭವಿ ಶಿಲ್ಪಿಗಳಿಗೆ ವಹಿಸುವ ಬಗ್ಗೆ ನಿರ್ಣಯ ಕೈಗೊಳ್ಳಲು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಮಧ್ಯೆ ಸಾರ್ವತ್ರಿಕ ಚುನಾವಣೆ ಘೋಷಣೆಯಾದ ಪ್ರಯುಕ್ತ ಸಮಿತಿ ಸಭೆ ಸೇರಿರಲಿಲ್ಲ. ಈಗ ಮಾನ್ಯ ಸಮಾಜ ಕಲ್ಯಾಣ ಸಚಿವರು ಅಧ್ಯಕ್ಷತೆಯಲ್ಲಿ ತೀರ್ಮಾನ ಕೈಗೊಳ್ಳಲು ತುರ್ತಾಗಿ ಸಭೆ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ಸರ್ಕಾರಿ ಆದೇಶ ಸಂ.ಸೆಕೆಇ 268 ಪದಕ 2003 ದಿ: 20.10.2003 ರಂದು ಬಿಡುಗಡೆಯಾದ ರೂ. 20,00 ಲಕ್ಷಗಳು ಆಯುಕ್ತರರು, ಸಮಾಜ ಕಲ್ಯಾಣ ಇಲಾಖೆ, ರವರು ವೈಯುಕ್ತಿಕ ಖಾತೆಯಲ್ಲಿ ಜಮೆಯಾಗುರುತ್ತದೆ.

494(1141) : ಶ್ರೀ ವಾಟಾಳ್ ನಾಗರಾಜ್ (ವಿಧಾನ ಸಭಾ ಸದಸ್ಯರು) ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರದ ಅಭಿವೃದ್ಧಿ ದೃಷ್ಟಿಯಿಂದ ಕನಿಷ್ಠ ಹತ್ತು ಸಾವಿರ ಮಂದಿ ಉದ್ಯೋಗ ನೀಡುವಂತಹ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕಾರ್ಯಕ್ರಮಗಳ ವಿವರಗಳನ್ನು ಒದಗಿಸುವುದು;

ಇ) ಇಲ್ಲದಿದ್ದಲ್ಲಿ ಹಿಂದುಳಿದ ಗಡಿ ಪ್ರದೇಶದ ವ್ಯಾಪ್ತಿಗೆ ಸೇರಿದ ಚಾಮರಾಜನಗರ ಜಿಲ್ಲೆಗೆ ಯಾವುದಾದರೂ ವಿಶೇಷ ಸವಲತ್ತುಗಳನ್ನು ನೀಡಲು ಸರ್ಕಾರ ನಿರ್ದರಿಸಿದೆಯೇ (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯ(ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು):

ಅ) ಚಾಮರಾಜನಗರ ತಾಲ್ಲೂಕು ಸೇರಿದಂತೆ ರಾಜ್ಯದ ಹೆಚ್ಚು ಮತ್ತು ಅತಿ ಹೆಚ್ಚು ಹಿಂದುಳಿದ 79 ತಾಲ್ಲೂಕುಗಳ ಕೈಗಾರಿಕೀಕರಣ ಕುರಿತ್ತು ಸಮಗ್ರ ಯೋಜನೆಯನ್ನು ರೂಪಿಸಲಾಗುತ್ತಿದೆ.

ಆ) ಯೋಜನೆಯ ರೂಪುರೇಶಗಳನ್ನು ಸಿದ್ದಪಡಿಸಲಾಗುತ್ತಿದೆ.

ಇ) ರಾಜ್ಯದ 2001–06 ಕೈಗಾರಿಕ ನೀತಿಯನ್ವಯ ಇಡೀ ಚಾಮರಾಜನಗರ ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದ ವಲಯ (ಇ) ಎಂದು ಘೋಷಿಸಲಾಗಿದೆ ಮತ್ತು ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

1. ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಬಂಡವಾಳ ಹೂಡಿಕೆ ಮೇಲೆ ಶೇ. 20ರಷ್ಟು ಸಹಾಯಧನ (ಗರಿಷ್ಟ ಮಿತಿ ರೂ. 10 ಲಕ್ಷ)

2. ಪರಿಶಿಷ್ಟ ಜಾತಿ/ಪಂಗಡ ಮತ್ತು ಮಹಿಳಾ ಉದ್ಯಮಿಗಳಿಗೆ ಶೇ. 5ರಷ್ಟು ಹೆಚ್ಚುವರಿ ಸಹಾಯಧನ (ಗರಿಷ್ಠ ಮಿತಿ ರೂ. 1 ಲಕ್ಷ)

3. ಕೈಗಾರಿಕೆಯ ಅನುಷ್ಠಾನಕ್ಕಾಗಿ ಪ್ರಥಮ ಮೂರು ವರ್ಷಗಳಲ್ಲಿ ಖರೀದಿಸುವ ಯಂತ್ರೋಪಕರಣ ಮೇಲಿನ ಪ್ರವೇಶ ತೆರಿಗೆ ವಿನಾಯಿತಿ ಹಾಗೂ ಪ್ರಥಮ ಐದು ವರ್ಷಗಳ ಅವಧಿಗೆ ಕಚ್ಚಾ ಸಾಮಗ್ರಿ ಖರೀದಿ ಮೇಲಿನ ಪ್ರವೇಶ ತೆರಿಗೆ ವಿನಾಯಿತಿ.

4. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕ ಉಪಯೋಗಕ್ಕಾಗಿ ಖರೀದಿಸಿದ ಜಮೀನಿನ ಮೇಲೆ ತಗಲುವ ಭೂ ಪರಿವರ್ತನ ಶುಲ್ಕ ವಿನಾಯಿತಿ (ಗರಿಷ್ಠ ಮಿತಿ 2 ಎಕರೆ).

ಪ್ರಸಕ್ತ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ರೋಜಗಾರ ಯೋಜನೆಯಡಿ 400 ನಿರುದ್ಯೋಗಿ ಯುವಕ/ಯುವತಿಯರಿಗೆ ಕೈಗಾರಿಕೆ/ ಸೇವೆ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗ ಕಲ್ಪಿಸಿಕೊಡುವ ಗುರಿ ಇದ್ದು, ಈಗಾಗಲೆ 285 ಅಭ್ಯರ್ಥಿಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ರೂ. 98.26 ಲಕ್ಷ ಆರ್ಥಿಕ ನೆರವು ಮಂಜೂರು ಮಾಡಲಾಗಿದೆ. ವಿಸ್ವ ಯೋಜನೆಯಡಿ 24 ಸಾಮೂಹಿಕ ಕಾರ್ಯಗಾರಗಳನ್ನು ನಿರ್ಮಿಸಲಾಗಿದೆ. ಸ್ಥಳೀಯ ಜನರಿಗೆ ಉದ್ಯಮಶೀಲತ ತರಬೇತಿ ನೀಡಿ ಕೈಗಾರಿಕಾ ಕ್ಷೇತ್ರದಲ್ಲಿ ತೊಡಗಿಸುವ ದೃಷ್ಟಿಯಿಂದ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರವನ್ನು ಈಗಾಗಲೇ ಜಾಮರಾಜನಗರದಲ್ಲಿ ತೆರೆಯಲಾಗಿದೆ. ಕೊಳ್ಳೇಗಾಲ, ಚಾಮರಾಜನಗರ ಮತ್ತು ಗುಂಡಲಪೇಟೆ ತಾಲ್ಲೂಕುಗಳಲ್ಲಿ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸುವ ಸಾಧ್ಯತೆಗಳ ಪರಿಶೀಲನೆಯಲ್ಲಿದೆ.

495(755): ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಖಾತೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಪಶುವೈದ್ಯ ಆಸ್ಪತ್ರಗಳಲ್ಲಿ ಖಾಲಿ ಇರುವ ಸ್ಥಳಗಳೆಷ್ಟು;

ಆ) ಚಿತ್ತಾಪುರ ಸಹಾಯಕ ನಿರ್ದೇಶಕರ ಹುದ್ದೆ ಎಷ್ಟು ವರ್ಷಗಳಿಂದ ಖಾಲಿ ಇದೆ ಖಾಲಿ ಇರುವ ಹುದ್ದೆಯನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ ಎಷ್ಟು ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು.

ಇ) ರಾಜ್ಯದಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳೆಷ್ಟು ; ಬೇರೆ ಇಲಾಖೆಗಳಿಗಾಗಿ ಎಷ್ಟು ಜನ ಸಹಾಯಕ ನಿರ್ದೇಶಕರರ ಸೇವೆಯನ್ನು ಎರವಲು ಸೇವೆ ಆದಾರದ ಮೇಲೆ ನೀಡಲಾಗಿದೆ.

ಈ) ಇವರು ಎರವಲು ಸೇವೆಯನ್ನು ರದ್ದು ಮಾಡುವ ಮೂಲಕ ಇಲಾಖೆಯಲ್ಲಿನ ತಾಲ್ಲೂಕು ಮಟ್ಟದಲ್ಲಿ ಇರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು; ಸರ್ಕಾರ ಈ ದಿಸೆಯಲ್ಲಿ ತಕ್ಷಣ ಕ್ರಮ ಕೈಗೊಳ್ಳುವುದು?

ಶ್ರೀ ಮಿರಾಜುದ್ದೀನ್.ಎನ್. ಪಟೀಲ(ಪಶುಸಂಗೋಪನೆ ಮತ್ತು ವಕ್ಫ ಖಾತೆ ಸಚಿವರು):

ಅ) ಪಶುವೈದ್ಯ ಆಸ್ಪತ್ರೆ ಚಿತ್ತಾಪುರದಲ್ಲಿ 6 ಹುದ್ದೆಗಳು ಖಾಲಿ ಇವೆ.

(ಸಹಾಯಕ ನಿರ್ದೇಶಕರು